# ಕನ್ನಡ ಚಲನಚಿತ್ರಗಳಲ್ಲಿ ಚದುರಂಗ ಮತ್ತು ತ. ರಾ. ಸು. ಅವರ ಕಾದಂಬರಿಗಳು

## ಉಮಾಶಂಕರ ಓ.ಎಂ.

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಶಿವಮೊಗ್ಗ.

## ABSTRACT:

ಸಾಹಿತ್ಯ ಮತ್ತು ಸಿನಿಮಾ ಸದಭಿರುಚಿಯ ಸೃಜನಾತ್ಮಕ ಕಲೆಗಳಾಗಿವೆ. ಒಂದು ಅಕ್ಷರ ರೂಪವಾಗಿದ್ದರೆ ಮತ್ತೊಂದು ದೃಶ್ಯ ರೂಪದ್ದಾಗಿದೆ. ಜಗತ್ತಿನ ಬಹುತೇಕ ಭಾಷೆಯ ಸಿನಿಮಾ ರಂಗಗಳು ಸಾಹಿತ್ಯ ಕ್ಷೇತ್ರದ ಕಥೆ, ಕಾದಂಬರಿ ಹಾಗೂ ಭಾವಗೀತೆಗಳನ್ನು ಆಶ್ರಯಿಸಿ ಬೆಳೆದಿವೆ. ಇಂತಹ ಪಯಣಕ್ಕೆ ದೀರ್ಘವಾದ ಇತಿಹಾಸವಿದೆ. ಕನ್ನಡ ಚಲನಚಿತ್ರ ಕ್ಷೇತ್ರದ ಇತಿಹಾಸವನ್ನು ಗಮನಿಸಿದಾಗ ಪ್ರಗತಿಶೀಲ ಸಾಹಿತ್ಯ ಪಂಥದ ಸಾಹಿತಿಗಳು ರಚಿಸಿದ ಕಥೆ, ಕಾದಂಬರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚಲನಚಿತ್ರಗಳಾಗಿರುವುದು ಕಂಡುಬರುತ್ತದೆ. ಇಲ್ಲಿ ಕೆಲವೊಮ್ಮೆ ಸಾಹಿತ್ಯ ಗೆದ್ದು ಸಿನಿಮಾ ಸೋತಿರುವ ನಿದರ್ಶನಗಳಿವೆ. ಕೆಲವು ಸಿನಿಮಾಗಳ ಕಥೆ ಸೋತು ಹಾಡುಗಳಿಂದಾಗಿ ಜನಪ್ರಿಯಗೊಂಡ ಪ್ರಸಂಗಗಳಿವೆ.

## KEYWORDS:

ಸಿನಿಮಾ, ಕಾದಂಬರಿ, ನಿರ್ದೇಶಕ, ಪ್ರಗತಿಶೀಲ ಸಾಹಿತ್ಯ, ದೃಶ್ಯಮಾಧ್ಯಮ.

ಸಿನಿಮಾ ಎಂಬುದು ಹಲವು ಕಲಾ ಪ್ರಕಾರಗಳ ಒಟ್ಟಂದದಿಂದ ಮೂಡುವ ಕಲಾ ಕೃತಿ. ಸಿನಿಮಾದಲ್ಲಿ ನಾಟಕದ ಗುಣಗಳನ್ನು ಪ್ರಧಾನವಾಗಿ ಕಂಡರೂ ಚಿತ್ರಕಲೆ, ಶಿಲ್ಪಕಲೆ, ಸಂಗೀತ, ಸಾಹಿತ್ಯ, ತಂತ್ರಜ್ಞಾನ ಮೊದಲಾದವುಗಳ ಹದವರಿತ ಮಿಶ್ರಣವಾಗಿದೆ. ಸಿನಿಮಾವೆಂದರೆ, ಸಾಹಿತ್ಯ ವಸ್ತುವೊಂದು ನಿರ್ದೇಶಕರ ಕಲ್ಪನಾ ಮಟ್ಟದಿಂದ ನಟ-ನಟಿಯರ ಅಭಿನಯ, ಸಂಗೀತ, ತಂತ್ರಜ್ಞಾನ ಮತ್ತು ಸಹಾಯಕರ ನೆರವಿನಿಂದ ಕಲಾತ್ಮಕ ಚಲನಚಿತ್ರವಾಗಿ ರೂಪಗೊಳ್ಳುವ ಪ್ರಕ್ರಿಯೆಯಾಗಿದೆ. ಅಂದರೆ, ಕಲಾವಿದರ ಅಭಿನಯಕ್ಕೆ ದೃಶ್ಯ ಸಂಯೋಜನೆ, ಹಿನ್ನೆಲೆ ಸಂಗೀತ, ಗ್ರಾಫಿಕಲ್ ಎಫೆಕ್ಟ್ ಸೇರಿ ಸಿನಿಮಾದ ಸೌಂದರ್ಯ ಶ್ರೀಮಂತಗೊಂಡು ಪ್ರೇಕ್ಷಕರನ್ನು ಸೆಳೆಯುತ್ತದೆ. ಬಹಳ ಪ್ರಮುಖವಾಗಿ ಸಿನಿಮಾ ರೂಪಗೊಳ್ಳಲು ಕಥೆ ಪ್ರಧಾನ ವಸ್ತುವಾಗಿರುತ್ತದೆ. ಸಿನಿಮಾ ನಿರ್ಮಾಣದ ಆರಂಭದ ದಿನಗಳಲ್ಲಿ ಪುರಾಣ, ಇತಿಹಾಸದ ಘಟನೆ, ಜಾನಪದ ಕಥೆ ಹಾಗೂ ಕಾಲ್ಪನಿಕ ಕಥೆಗಳು ಚಲನಚಿತ್ರದ ರೂಪವನ್ನು ಪಡೆದು ಜನಪ್ರಿಯವಾಗಿವೆ.

ತದನಂತರದಲ್ಲಿ ವಾಸ್ತವ ಅಥವಾ ನೈಜ ಘಟನೆಯೊಂದರ ಪ್ರಭಾವ ಅಥವಾ ಎಳೆಯನ್ನಾಧರಿಸಿ ಸಿನಿಮಾವನ್ನು ನಿರ್ಮಿಸಲಾಗುತ್ತಿದೆ. ಇತ್ತೀಚಿನ ಬಹುತೇಕ ಸಿನಿಮಾಗಳು ನಮ್ಮ ಸಮುದಾಯದ ಕಥೆಗಳೇ ಆಗಿರುವುದನ್ನು ಕಾಣುತ್ತೇವೆ. ನಾವು ಅನುಭವಿಸಿದ ಅಥವಾ ಕಂಡ ಸೋಜಿಗ, ಹೋರಾಟ, ಅನ್ಯಾಯ, ಪ್ರೇಮ ಮತ್ತು ಸಾಹಸದ ಕಥೆಗಳೇ ಸಿನಿಮಾವಾಗಿ ರೂಪುಗೊಳ್ಳುತ್ತಿವೆ. ಹೀಗೆ ರೂಪುಗೊಳ್ಳುವ ಸಿನಿಮಾದ ನಿರ್ದೇಶಕರು ಅಥವಾ ಕಥಾ ರಚನಾಕಾರರು ಕಥೆಯನ್ನು ಸೃಜಿಸುತ್ತಾರೆ. ಆದರೆ ಜಗತ್ತಿನ ಸಿನಿಮಾ ಅಥವಾ ಚಲನಚಿತ್ರ ಕ್ಷೇತ್ರವನ್ನು ಗಮನಿಸಿದಾಗ ಸಾಹಿತ್ಯ ಕ್ಷೇತ್ರದ ಕಥೆ– ಕಾದಂಬರಿಗಳು ಅಗತ್ಯ ಮಾರ್ಪಾಡುಗಳೊಂದಿಗೆ ಚಲನಚಿತ್ರವಾಗಿವೆ. ಇಂತಹ ಕಥೆ–ಕಾದಂಬರಿಗಳಲ್ಲಿ ಕೆಲವು ಕಲಾತ್ಮಕ ಚಲನಚಿತ್ರಗಳಾದರೆ ಮತ್ತೆ ಕೆಲವು ವಾಣಿಜ್ಯಿಕ ಚಲನಚಿತ್ರಗಳಾಗಿ ನಿರ್ಮಾಣಗೊಂಡಿವೆ. ಇಂತಹ ಪ್ರಯೋಗಕ್ಕೆ ಕನ್ನಡ ಸಿನಿಮಾ ಕ್ಷೇತ್ರವು ಹೊರತಲ್ಲ. ಕನ್ನಡ ಸಿನಿಮಾ ಮತ್ತು ಸಾಹಿತ್ಯಲೋಕಗಳು ಪರಸ್ಪರ ಪೂರಕವಾಗಿ 1950ರಿಂದಲೂ ಬೆಳೆದು ಬಂದಿವೆ. ಆದ್ದರಿಂದ ಅಕ್ಷರ ಮಾಧ್ಯಮದ ಪ್ರಭಾವ ದೃಶ್ಯ ಮಾಧ್ಯಮದ ಮೇಲೆ ನಿರಂತರವಾಗಿ ಇದ್ದೇ ಇದೆ.

ಸಾಹಿತ್ಯಾಭಿವ್ಯಕ್ತಿಯು ಅಂದಂದಿನ ಸಾಮಾಜಿಕ ಸ್ಥಿತ್ಯಂತರಗಳು, ಜಾಗತಿಕ ಮತ್ತು ದೇಶಿಯ ಪ್ರಭಾವಗಳು, ತತ್ವ ಮತ್ತು ಸಿದ್ಧಾಂತಗಳು ಹಾಗೂ ಸ್ಥಳೀಯ ಸಂಗತಿಗಳಿಂದ ಪ್ರಭಾವಿಸಲ್ಪಟ್ಟಿರುತ್ತವೆ. ಆದ್ದರಿಂದಲೇ 20ನೇ ಶತಮಾನದ ಸಾಹಿತ್ಯವು ಪ್ರತಿ 20–25 ವರ್ಷಗಳಿಗೊಮ್ಮೆ ತೀವ್ರವಾಗಿ ಬದಲಾವಣೆಗೊಂಡಿರುವುದನ್ನು ಕಾಣುತ್ತೇವೆ. ಹೊಸತನ್ನು ಸ್ವೀಕರಿಸುವಾಗ ಹಳೆಯದರ ತಿರಸ್ಕಾರ ಅಥವಾ ಸುಧಾರಣೆಯೊಂದಿಗೆ ಮುಂದುವರೆಸಿಕೊಂಡು ಹೋಗಿರುವ ಲಕ್ಷಣ ರೂಢಿಯಲ್ಲಿದೆ. ಆದ್ದರಿಂದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದಿ, ಆಧುನಿಕೋತ್ತರ ಸಾಹಿತ್ಯ ರೂಪಗಳೆಂದು ವೈವಿಧ್ಯಮಯವಾಗಿ ಬೆಳೆದು ಬಂದಿವೆ. ಇದು ಕನ್ನಡ ಸಾಹಿತ್ಯದ ಕಾಲಾನುಕ್ರಮಣಿಕೆ ಮಾತ್ರವಾಗಿರದೆ ಸಾಹಿತ್ಯವು ವಿಕಾಸಮುಖಿ ಹಾಗೂ ಸಮಾಜಮುಖಿ ಆಗಿರುವ ಬೆಳವಣಿಗೆಯನ್ನು ಸಾಕ್ಷೀಕರಿಸುತ್ತದೆ. ಸಿನಿಮಾ ಕ್ಷೇತ್ರವು ಆಧುನೀಕರಣಗೊಂಡಂತೆ ಸಾಹಿತ್ಯದ ಕಥೆ–ಕಾದಂಬರಿ, ಕಾವ್ಯಗಳು ಸಿನಿಮಾದ ಕಥಾವಸ್ತುವಾಗಿ ಪ್ರವೇಶ ಪಡೆದವು. 1950 ಮತ್ತು 60ರ ದಶಕದಲ್ಲಿ ಕನ್ನಡ ಸಾಹಿತ್ಯದ ನವೋದಯ ಮತ್ತು ಪ್ರಗತಿಶೀಲ ಪಂಥಗಳ ಆಯ್ದ ಕಥೆ–ಕಾದಂಬರಿಗಳು ಸಿನಿಮಾವಾಗಿ ರೂಪುಗೊಂಡಿವೆ. ಚಲನಚಿತ್ರದ ಅವತರಿಣಿಕೆ ಕಂಡ ಸಿನಿಮಾಗಳು ಕೇವಲ ಮನರಂಜನಾತ್ಮಕ ದೃಷ್ಟಿಯಿಂದ ಮಹತ್ವವನ್ನು ಪಡೆಯದೆ ಕೌಟುಂಬಿಕ ಮತ್ತು ಸಾಮಾಜಿಕ ಸಂಗತಿಗಳನ್ನು ಕೇಂದ್ರೀಕರಿಸಿದ್ದವು. ಇವು ಹೆಚ್ಚಾಗಿ ಕೆಳ ಹಾಗೂ ಮಧ್ಯಮವರ್ಗದ ಜನರನ್ನು ಗಮನದಲ್ಲಿಟ್ಟುಕೊಂಡು ಬಂದಂಥ ವಸ್ತುಗಳು. ಇವು ಶ್ರೀಮಂತಿಕೆಯ ಅವಾಸ್ತವಿಕ ವೈಭವೀಕರಣ ಹಾಗೂ ಮಧ್ಯಮವರ್ಗದ ಕನಸುಗಳ

ಭ್ರಮಾತ್ಮಕ ಲೋಕವನ್ನು ಸೃಷ್ಟಿಸಿದವು. ಸಾಮಾನ್ಯವಾಗಿ ಇವುಗಳಲ್ಲಿ ಸರಳ, ಸುಂದರ, ಸಂತೃಪ್ತ ಕುಟುಂಬಗಳು ಚಿತ್ರಿತವಾಗುತ್ತಿದ್ದವು. ಇಲ್ಲಿಯ ಬಹುತೇಕ ಸಿನಿಮಾಗಳು ಆದರ್ಶ ಪಾತ್ರಗಳಾದ ತಂದೆ–ತಾಯಿ, ಪತಿ–ಪತ್ನಿ, ಮಕ್ಕಳು, ತಾಯಿ ಹಾಗೂ ಇವರ ನಡುವಿನ ಮಧುರ ಸಂಬಂಧಗಳ ವಿಶಿಷ್ಟ ಪರಂಪರೆಯತ್ತ ಗಮನವಿಟ್ಟಿದ್ದವು. ಆ ಮೂಲಕ ಪ್ರಗತಿಶೀಲ ಸಾಹಿತ್ಯ ಪಂಥದ ಅಕ್ಷರ ರೂಪದಲ್ಲಿನ ಆಶಯವನ್ನು ದೃಶ್ಯರೂಪಕದ ಮೂಲಕ ಪ್ರಯೋಗಿಸಿ ಅರ್ಥೈಸುವ ಪ್ರಯತ್ನವನ್ನು ಮಾಡಿದವು.

ಚದುರಂಗರು ಪ್ರಗತಿಶೀಲ ಸಾಹಿತ್ಯ ಪಂಥದ ಪ್ರಮುಖ ಸಾಹಿತಿಗಳು. ಸಾಹಿತ್ಯ ಅಷ್ಟೇ ಅಲ್ಲದೆ ಸಿನಿಮಾ ಕೂಡ ಅವರ ಒಲುಮೆಯ ಕ್ಷೇತ್ರವು ಆಗಿತ್ತು. ಚಲನಚಿತ್ರದ ನಿರ್ದೇಶಕರಾಗಿ, ನಿರ್ಮಾಪಕರಾಗಿ, ಕಥೆಗಾರರಾಗಿ ಪ್ರಾಯೋಗಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಿನಿಮಾ ಕಲೆಯ ಬಗ್ಗೆ ಆಕರ್ಷಿತರಾಗಿದ್ದ ಚದುರಂಗರು ಪುಣೆಯಲ್ಲಿ ಅದರ ತಂತ್ರದ ಬಗ್ಗೆ ಸ್ವಯಂ ಅಧ್ಯಯನ ನಡೆಸಿದ್ದರು. ಪತ್ರಿಕೆಗಳಲ್ಲಿ ಚಲನಚಿತ್ರ ವಿಮರ್ಶೆಗಳನ್ನೂ ಬರೆದರು. ಸುಮಾರು 1948ರಲ್ಲಿ ಮೈಸೂರಿನಲ್ಲಿ ತಯಾರಾದ 'ಭಕ್ತ ರಾಮದಾಸ' ಚಿತ್ರಕ್ಕೆ ಕಥಾಲೇಖಕರಾಗಿದ್ದರು. ಅಷ್ಟೇ ಅಲ್ಲದೆ ಮುಂದೆ ವಿದೇಶಿ ಚಿತ್ರಸಂಸ್ಥೆ ಎಂ. ಜಿ. ಎಂ ತಯಾರಿಸಿದ ಇಂಗ್ಲೀಷಿನ 'ಮಾಯಾ' ಚಿತ್ರದ ಸಹನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು. ಅವರ ಈ ಅನುಭವ ಮತ್ತು ಆಸಕ್ತಿಗಳ ಪರಿಣಾಮವಾಗಿ ಗೆಳೆಯರೊಂದಿಗೆ ಶ್ರೀನಾಗೇಂದ್ರ ಚಿತ್ರಕಲಾ ಸಂಸ್ಥೆಯನ್ನು ಸ್ಥಾಪಿಸಿ ತಮ್ಮದೇ ಕಾದಂಬರಿಯಾದ 'ಸರ್ವಮಂಗಳಾ' ಚಿತ್ರವಾಗಿ ನಿರ್ಮಿಸಿದರು. ಈ ಕಾದಂಬರಿಯ ಕಥೆಯು 1930ರ ದಶಕದಲ್ಲಿನ ಕಲ್ಲಹಳ್ಳಿ ಎಂಬ ಹಳ್ಳಿಯ ಜನಜೀವನ ಕೇಂದ್ರೀಕರಿಸಿದ್ದಾಗಿತ್ತು. ಅಲ್ಲಿಯ ಜನರ ಆಚಾರ, ಜಾತ್ರೆ, ಮದುವೆ, ಪ್ರೇಮಕಥೆಗಳೊಂದಿಗೆ ಅಂದಿನ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ನಿರೂಪಿಸುತ್ತಿತ್ತು. ಒಲಿದವರನ್ನು ವಿವಾಹ ಬಂಧನದಲ್ಲಿ ಒಂದಾಗಿಸದ ಕಾರಣದಿಂದಾಗಿ ಉಂಟಾಗಬಹುದಾದ ದುರಂತಗಳ ಬಗ್ಗೆ ಕಾದಂಬರಿ ಮಾತನಾಡುತ್ತಿತ್ತು. ಚದುರಂಗರು ಈ ಕಥೆಯನ್ನು ಚಲನಚಿತ್ರವಾಗಿಸುವಲ್ಲಿ ಸ್ವತಃ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿದ್ದರಿಂದ ಕಾದಂಬರಿಯ ಆಶಯವು ಸಿನಿಮಾದಲ್ಲೂ ಯಥಾವತ್ತಾಗಿ ಕಂಡು ಬರುವಂತೆ ನೋಡಿಕೊಂಡಿದ್ದಾರೆ. ಅಲ್ಲದೆ, ಈ ಚಿತ್ರವು 1966–67ರ ರಾಜ್ಯಚಲನಚಿತ್ರದ ಪ್ರಶಸ್ತಿಗಳನ್ನು ಗಳಿಸಿಕೊಂಡಿತು. ಚದುರಂಗರ ಮತ್ತೊಂದು ಕಾದಂಬರಿ 'ಉಯ್ಯಾಲೆ'. ಪತಿ ಪತ್ನಿಯರ ವಿರಸ ಸಾಮರಸ್ಯ, ಕಾನೂನಿನ ಹೋರಾಟ, ಹೆಣ್ಣಿನ ತಳಮಳ, ಕೌಟುಂಬಿಕ ಜಗಳದ ನಡುವೆ ಸಿಲುಕಿದ ಮಕ್ಕಳ ಅನಾಥ ಪ್ರಜ್ಞೆ, ಇಂತಹ ಕೌಟುಂಬಿಕ ಪರಿಸ್ಥಿತಿಯಿಂದಾಗಿ ಮಕ್ಕಳು ಸಮಾಜ ಕಂಟಕರಾಗುವ ತಲ್ಲಣಗಳನ್ನು ಕಾದಂಬರಿಯು ನಿರೂಪಿಸುತ್ತದೆ. ಈ ಕಾದಂಬರಿಯು ಇದೇ ಹೆಸರಿನ ಚಲನಚಿತ್ರವಾಯಿತು. ಸ್ವತಃ ಚದುರಂಗರೇ ಚಿತ್ರಕಥೆ ರಚಿಸಿದರು. ಉತ್ತಮ ಚಿತ್ರಕಥಾ

ಲೇಖಕರೆಂಬ ಪ್ರಶಸ್ತಿಯನ್ನು ಚದುರಂಗರು ಈ ಸಿನಿಮಾಕ್ಕೆ ಪಡೆದುಕೊಂಡರು.

ಕನ್ನಡ ಚಲನಚಿತ್ರರಂಗವು ಪ್ರವರ್ಧಮಾನಕ್ಕೆ ಬಂದ 70-80ರ ದಶಕಗಳಲ್ಲಿ ಕತೆ-ಕಾದಂಬರಿ ಆಧಾರಿತ ಸಿನಿಮಾಗಳ ಪರ್ವಕಾಲವಾಗಿತ್ತು. ಅಂದಿನ ಖ್ಯಾತ ನಿರ್ದೇಶಕರಾದ ಜಿ. ವಿ. ಅಯ್ಯರ್, ಬಿ. ವಿ. ಕಾರಂತ, ಪುಟ್ಟಣ್ಣ ಕಣಗಾಲ್, ದೊರೈ ಭಗವಾನ್ ಮೊದಲಾದವರ ನಿರ್ದೇಶನದಲ್ಲಿ ಕತೆ-ಕಾದಂಬರಿಗಳು ದೃಶ್ಯರೂಪಕ್ಕೇರಲ್ಪಟ್ಟವು. ಪ್ರಗತಿಶೀಲ ಸಾಹಿತ್ಯವು ಅತಿ ಕಡಿಮೆ ಅವಧಿಯಲ್ಲಿ ಹೆಚ್ಚು ಓದುಗ ವಲಯವನ್ನು ಗಳಿಸಿಕೊಂಡಿತ್ತು. ಅಂತೆಯೇ ಪ್ರಗತಿಶೀಲ ಕಾಲದ ಹಲವಾರು ಕಥೆ, ಕಾದಂಬರಿಗಳು ಚಲನಚಿತ್ರಗಳಾಗಿ ದೊಡ್ಡ ಅಭಿಮಾನಿ ಬಳಗವನ್ನು ಪಡೆದುಕೊಂಡಿತ್ತು. ಈ ಹಿನ್ನಲೆಯಲ್ಲಿ ಪ್ರಗತಿಶೀಲ ಸಾಹಿತ್ಯ ಪಂಥದ ಪ್ರಮುಖ ಕಾದಂಬರಿಕಾರರಾದ ತರಾಸು ಅವರ ಚಂದವಳ್ಳಿ ತೋಟ, ಬಿಡುಗಡೆಯ ಬೇಡಿ, ಚಕ್ರತೀರ್ಥ, ಚಂದನದ ಗೊಂಬೆ, ಬೆಂಕಿಯ ಬಲೆ, ಗಾಳಿಮಾತು, ನಾಗರಹಾವು, ಮಸಣದ ಹೂವು, ಹಂಸಗೀತೆ, ಆಕಸ್ಮಿಕ, ಅಕ್ಕಮ್ಮನ ಭಾಗ್ಯ, ಅಪರಾಧಿ, ಪರಿಣಾಮ ಮೊದಲಾದ ಕಾದಂಬರಿಗಳು ಚಲನಚಿತ್ರಗಳಾಗಿ ಬೆಳ್ಳಿತೆರೆಯಲ್ಲಿ ಪ್ರದರ್ಶನಗೊಂಡಿವೆ. ತರಾಸು ಅವರು ಸಿನಿಮಾಗಳಿಗೆ ಕಥಾ ವಸ್ತು ನೀಡಿದ್ದಲ್ಲದೆ ಹಾಡುಗಳನ್ನು ಸಹ ರಚಿಸಿ ಕೊಟ್ಟಿದ್ದಾರೆ.

'ಹಂಸಗೀತೆ' ತರಾಸು ಅವರ ಜನಪ್ರಿಯ ಕಾದಂಬರಿ. 1975ರಲ್ಲಿ ಇದೇ ಹೆಸರಿನಲ್ಲಿ ಜಿ. ವಿ. ಅಯ್ಯರ್ ಅವರ ನಿರ್ದೇಶನದಲ್ಲಿ ಸಿನಿಮಾ ಆಗಿ ಪ್ರದರ್ಶನ ಕಂಡಿತ್ತು ಹಾಗೂ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ಪಡೆದಿತ್ತು. ಆದರೆ ಈ ಕಾದಂಬರಿಯನ್ನು 1956ರಲ್ಲಿಯೇ ರಾಜ ನವಾಥೆ ಎಂಬ ನಿರ್ದೇಶಕರು 'ಬಸಂತ್ ಬಹಾರ್' ಎಂಬ ಹೆಸರಿನಲ್ಲಿ ಹಿಂದಿ ಸಿನಿಮಾ ಮಾಡಿದ್ದರು. ಹಂಸಗೀತೆಯು ಜಾತಿಭ್ರಷ್ಟ, ಬಂಡಾಯಕಾರನಾದ ಸಂಗೀತಗಾರನ ಜೀವನ ಕುರಿತಾದ ಕಥೆಯಾಗಿದೆ. ಈ ಕಾದಂಬರಿಯ 18ನೇ ಶತಮಾನದ ಭೈರವಿ ವೆಂಕಟಸುಬ್ಬಯ್ಯ ಅವರ ಜೀವನವನ್ನು ಆಧರಿಸಿದೆ ಎಂಬ ಅಭಿಪ್ರಾಯವೂ ಇದೆ. ಕಾದಂಬರಿಯಲ್ಲಿ ನಿರೂಪಕನ ಪಾತ್ರವಿದ್ದು ಆತನು ವೆಂಕಟಸುಬ್ಬಯ್ಯನವರ ಕುರಿತ ಸಂಶೋಧನೆಗೆ ಬಂದವನಾಗಿರುತ್ತಾನೆ. ಆದರೆ ಸಿನಿಮಾದಲ್ಲಿ ನಿರೂಪಕರ ಪಾತ್ರವಿಲ್ಲ. ಸಿನಿಮಾ ಸಂಭಾಷಣೆಗಿಂತ ಹಾಡಿನ ಸನ್ನಿವೇಶಗಳ ಮೂಲಕವೇ ಸಾಗುವುದು ವಿಶಿಷ್ಟವೆನಿಸಿದೆ. ಈ ಕಥೆಯು ಚಿತ್ರದುರ್ಗದ ಮದಕರಿ ನಾಯಕನ ಕಾಲದ ಚಿತ್ರಣವನ್ನು ಸಹ ಒಳಗೊಂಡಿದೆ.

ತರಾಸು ಅವರ 'ಚಂದನದ ಗೊಂಬೆ' ಕಾದಂಬರಿಯನ್ನು 1979ರಲ್ಲಿ ದೊರೈ ಭಗವಾನ್ ಅವರು ಚಲನಚಿತ್ರವಾಗಿ ನಿರ್ದೇಶನ ಮಾಡಿದ್ದರು. ಈ ಚಿತ್ರವು ಕಥೆಯೊಂದಿಗೆ ಹಾಡುಗಳ ಮೂಲಕ ಹೆಚ್ಚು ಪ್ರಸಿದ್ಧಿ ಪಡೆಯಿತು. ಇದೇ ಕಥೆಯು

'ರಾಮಪುರಂಲೊ ಸೀತ' ಎಂಬ ಶೀರ್ಷಿಕೆಯಲ್ಲಿ ತೆಲುಗು ಭಾಷೆಯಲ್ಲೂ ಚಲನಚಿತ್ರವಾಗಿ ಪ್ರದರ್ಶನ ಕಂಡಿತು. 'ಚಂದನದ ಗೊಂಬೆ' ಇಂದಿನ ನಮ್ಮ ಗ್ರಾಮ ಜೀವನದ ಒಂದು ಚಿತ್ರ. ಸಮಾಜ ಜೀವಿಯಾದ ಮಾನವ, ತನ್ನ ಸುತ್ತಲ ಸಮಾಜದೊಂದಿಗೆ ಸುಖವಾಗಿ ಬಾಳಬೇಕೆಂದರೆ, ವ್ಯಕ್ತಿಯಲ್ಲಿ ಹೇಗೆ ಶೀಲಶುದ್ಧಿ, ಸಹಾನು ಭೂತಿ, ಪರಾನುಕಂಪಗಳಿರಬೇಕೋ, ಅಷ್ಟೇ ಮಟ್ಟಿಗೆ ಸುತ್ತಲ ಜನದಲ್ಲಿಯೂ ಸ್ನೇಹ. , ತ್ಯಾಗ, ಸೌಹಾರ್ದತೆಯ ಭಾವನೆಗಳು ಸಮಾನ ಪ್ರಮಾಣ ನಲ್ಲಿ ಬೆಳೆದಿರಬೇಕು. ಹಾಗಲ್ಲದೆ ವ್ಯಕ್ತಿಯಲ್ಲಾಗಲಿ, ಸುತ್ತಲ ಜೀವಿಗಳಲ್ಲಾಗಲಿ, ಬಾಳನ್ನು ಸುಂದರಗೊಳಿಸುವ ಈ ಗುಣಗಳ ಅಭಾವ ಕಂಡು ಬಂದರೆ ಮಾನವ ಸಹಜವಾದ ಸ್ನೇಹ, ವಿಶ್ವಾಸಗಳು, ಸ್ವಾರ್ಥ, ದುರಾಸೆಯ ಕುದ್ರ ದೇವತೆಗಳಿಗೆ ಬಲಿಯಾದರೆ, ಆಗ ವ್ಯಕ್ತಿಯ ವೈಯ್ಯಕ್ತಿಕ ಬಾಳು ದುರ್ಭರವಾಗುವುದಷ್ಟೇ ಅಲ್ಲ, ಸಮಾಜ ಜೀವನನೇ ಕಲುಷಿತವಾಗಿ, ಮಾರಕವಾಗಿ ಪರಿಣಮಿಸುವುದು. ಈ ಭಾವನೆಯ ಬುನಾದಿಯ ಮೇಲೆ ರಚಿತವಾದ ಕಾದಂಬರಿ ಎಂದು ತರಾಸು ಅವರು 'ಚಂದನದ ಗೊಂಬೆ' ಕಾದಂಬರಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಕನ್ನಡ ಚಲನಚಿತ್ರ ಕ್ಷೇತ್ರವನ್ನು 'ಚಂದನವನ' ಎಂದು ಕರೆಯಲಾಗುತ್ತದೆ. ಈ ಹೆಸರು ಬರಲು ಕಾರಣ 1964 ರಲ್ಲಿ ಬಿಡುಗಡೆಯಾದ ತರಾಸು ಅವರ ಕಾದಂಬರಿ ಆಧಾರಿತ 'ಚಂದವಳ್ಳಿಯ ತೋಟ' ಎಂಬ ಚಲನಚಿತ್ರ ಎಂಬ ಮಾತು ಪ್ರಚಲಿತದಲ್ಲಿದೆ. ಈ ಕಾದಂಬರಿಯು ಗ್ರಾಮದ ಅವಿಭಕ್ತ ಕುಟುಂಬ ಒಂದು ದುರಾಸೆಯ ವ್ಯಕ್ತಿಯಿಂದಾಗಿ ಅವನತಿ ಕಾಣುವ ಕಥೆಯಾಗಿದೆ. ಗ್ರಾಮೀಣರ ಬದುಕಿನ ರೀತಿ ನೀತಿಗಳು, ಅವರ ಆದರ್ಶಮಯ ಸಾಂಸ್ಕೃತಿಕ ಬದುಕನ್ನು ಹೇಳುತ್ತಲೇ ಅಂತ ಆದರ್ಶ ಬದುಕಿನ ಜನರನ್ನು ಕಾಡುವ ಆಧುನಿಕತೆಯ ನೆರಳನ್ನು ಈ ಚಿತ್ರ ತೆರೆದಿಡುತ್ತದೆ. ಈ ಚಿತ್ರದಲ್ಲಿನ ಗಾಂಧಿವಾದಿ ವಿಷಯ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಬಡತನದ ನಿವಾರಣೆಗೆ ಕಂಡುಕೊಂಡಿದ್ದ ಚಿಕಿತ್ಸಕ ಕ್ರಮಗಳು ಅಭಿಮಾನಿಗಳನ್ನು ಸೆಳೆಯುತ್ತವೆ. ಕಾದಂಬರಿ ಬಿಡುಗಡೆಯಾದ ಅವಧಿಯಲ್ಲಿ ಗಳಿಸಿಕೊಂಡಿದ್ದ ಓದುಗ ವರ್ಗದಷ್ಟೇ ಸಂಖ್ಯೆಯ ಅಭಿಮಾನಿಗಳನ್ನು ಚಂದವಳ್ಳಿ ತೋಟ ಸಿನಿಮಾ ಕೂಡ ಗಳಿಸಿಕೊಂಡಿತ್ತು. ಈ ಸಿನಿಮಾಕ್ಕೆ ಅತ್ಯುತ್ತಮ ಪ್ರಾದೇಶಿಕ ಸಿನಿಮಾ ಎಂಬ ರಾಷ್ಟ್ರಪ್ರಶಸ್ತಿಯು ಸಹ ಬಂದಿತ್ತು.

'ನಾಗರಹಾವು' ಸಿನಿಮಾ ತರಾಸು ಅವರ ನಾಗರಹಾವು, ಎರಡು ಹೆಣ್ಣು ಒಂದು ಗಂಡು ಹಾಗೂ ಸರ್ಪಮತ್ಸರ ಈ ಮೂರು ಕಾದಂಬರಿಗಳ ಸಂಯುಕ್ತ ರೂಪವಾಗಿದೆ. ಈ ಮೂರು ಕಾದಂಬರಿಗಳನ್ನು ಸೇರಿಸಿ ಪುಟ್ಟಣ್ಣ ಕಣಗಾಲ್ ಅವರು 'ನಾಗರಹಾವು' ಸಿನಿಮಾವನ್ನು ನಿರ್ದೇಶಿಸಿದರು. ಈ ಮೂರು ಕಾದಂಬರಿಗಳ ಕಥೆ ಒಂದೇ ಆಗಿದ್ದು, ಇವುಗಳಲ್ಲಿ ಯುವಕ ರಾಮಾಚಾರಿಯು ಪ್ರತಿಭಟನಾತ್ಮಕ ಮನೋಭಾವನೆಯನ್ನು ಚನ್ನಾಗಿ ಚಿತ್ರಿಸಿದ್ದಾರೆ. ಪ್ರತಿಭಟನೆ, ಸಿಟ್ಟು, ಹಿಂಸೆ ಇವು ಸೂಕ್ತ

ಪರಿಸರದಿಂದ ಉದಾತತ್ತೆಯನ್ನು ಪಡೆಯಬಹುದಾಗಿತ್ತು. ಆದರೆ ಇಲ್ಲಿ ಕ್ರೌರ್ಯ ಕೊನೆಯವರೆಗೂ ಕಾಯ್ದುಕೊಂಡು ಹೋಗುತ್ತದೆ. ಸೇಡಿನ ಭಾವನೆ ಜೀವಂತವಾಗಿದೆ. ಇದೇ ರೀತಿಯ ಭಾವನೆ ಸಿನಿಮಾ ನೋಡಿದಾಗಲೂ ಬರುತ್ತದೆ. ಆದರೆ ಹೆಚ್ಚು ಜನಪ್ರಿಯತೆಯನ್ನು ತಂದುಕೊಟ್ಟ ಈ ಸಿನಿಮಾ ಹಿಂದಿಯಲ್ಲಿ 'ಜೆಹ್ರೀಲಾ ಇನ್ಸಾನ್', ತಮಿಳಿನಲ್ಲಿ 'ರಾಜನಾಗಂ' ಹಾಗೂ ತೆಲುಗಿನಲ್ಲಿ 'ಕೊಡೆನಾಗು' ಎಂಬ ಹೆಸರಿನಲ್ಲಿ ಪುನರ್ ನಿರ್ಮಾಣಗೊಂಡಿತ್ತು. ತರಾಸು ಅವರ ಆಕಸ್ಮಿಕ, ಅಪರಾಧಿ ಮತ್ತು ಪರಿಣಾಮ ಕಾದಂಬರಿಗಳನ್ನು ಸೇರಿಸಿ ಟಿ.ಎಸ್. ನಾಗಾಭರಣರವರು 'ಆಕಸ್ಮಿಕ' ಎಂಬ ಸಿನಿಮಾ ಮಾಡಿದರು. ಇದು ಡಾ. ರಾಜಕುಮಾರ್ ಅಭಿನಯದ ಜನಪ್ರಿಯ ಸಿನಿಮಾವಾಗಿದೆ.

ತಮ್ಮ ಹಲವಾರು ಕೃತಿಗಳು ಸಿನಿಮಾಗಳಾಗಿರುವ ಹಿನ್ನೆಲೆಯಲ್ಲಿ ತರಾಸು ಒಂದೆಡೆ ಹೀಗೆ ಹೇಳುತ್ತಾರೆ: ಸಾಹಿತ್ಯವು ದೃಶ್ಯಮಾಧ್ಯಮದ ಮೂಲಕ ನಮಗೆ ಕಂಡಾಗ ಅದಕ್ಕೊಂದು ವಿಶಿಷ್ಟ ಗುಣ ಬರುತ್ತದೆ. ಕೃತಿಯೊಂದನ್ನು ನಿರ್ದೇಶಕ ಸಿನಿಮಾ ಮಾಡಲು ಸಿದ್ಧಮಾಡುವುದು ಆ ಕೃತಿ ಜನಮನ್ನಣೆ ಪಡೆದಾಗ ಮಾತ್ರ. ಮನ್ನಣೆ ಎಂಬುದು ಸಿಗುವುದು ಕೃತಿಯನ್ನು ಹೆಚ್ಚು ಮಂದಿ ಓದಿದಾಗ. ಆ ದಿಸೆಯಲ್ಲಿ ಇಂತಹ ಕೃತಿಯಿಂದ ಸಿನಿಮಾ ಬಂದಿದ್ದೇ ಆದರೆ; ಇದೇ ಜನ ಮೂಲಕತೆಯ ಒಟ್ಟಾರೆ ಪರಿಣಾಮವನ್ನು ನಿರೀಕ್ಷಿಸುತ್ತಾರೆ. ನನ್ನ ಈ ಪೀಠಿಕೆ ಕೃತಿಯನ್ನೇ ಕ್ಯಾಮರಾದ ಮುಂದೆ ಇಟ್ಟು ಫಿಲಂ ಓಡಿಸಿ ಎನ್ನುವುದಲ್ಲ. ಕಾದಂಬರಿಯಲ್ಲಿ ಕೃತಿಕಾರನ ವರ್ಣನೆ ಪೇಜುಗಟ್ಟಲೆ ಇರಬಹುದು. ಆದರೆ ಸಿನಿಮಾದ ಚೌಕಟ್ಟಿನಲ್ಲಿ ಇಂತಹದು ಖಂಡಿತ ತೋರಿಸಲು ಆಗುವುದಿಲ್ಲ. ನಿರ್ದೇಶಕ ಕೃತಿಯನ್ನು ಬದಲಾವಣೆ ಮಾಡಿಕೊಳ್ಳುವುದಕ್ಕೆ ಅಭ್ಯಂತರವಿಲ್ಲ. ಈ ಬದಲಾವಣೆ ಮೂಲ ಉದ್ದೇಶಕ್ಕೆ ಚ್ಯುತಿ ಬರದಂತೆ ಆಗಬೇಕು. ಆ ದಿಸೆಯಲ್ಲಿ ನನ್ನ 'ಹಂಸಗೀತೆ' ಕಾದಂಬರಿ ಚಿತ್ರವಾದಾಗ ಅದರ ಬಗ್ಗೆ ನಾನು ಇನ್ನೊಂದು ಮಾತು ಆಡುವಂತೆಯೇ ಇರಲಿಲ್ಲ.

ಕನ್ನಡ ಚಲನಚಿತ್ರ ಕ್ಷೇತ್ರವು ಸಾಹಿತ್ಯ ವಲಯದ ಕಥೆ, ಕಾದಂಬರಿ ಹಾಗೂ ಭಾವಗೀತೆಗಳನ್ನು ಪ್ರಯೋಗಿಸಿಕೊಂಡು ಬೆಳೆದು ಬಂದಿದೆ. ಈ ಕಾರ್ಯದಿಂದಾಗಿ ಸಾಹಿತಿ, ನಿರ್ದೇಶಕ, ಸಂಗೀತ ಸಂಯೋಜಕ, ಗೀತ ರಚನಕಾರ ಹಾಗೂ ಗಾಯಕರಿಗೆ ಪ್ರಸಿದ್ಧತೆಯನ್ನು ತಂದುಕೊಟ್ಟಿವೆ. ಅಕ್ಷರ ರೂಪದ ಸಾಹಿತ್ಯ ದೃಶ್ಯರೂಪವನ್ನು ಪಡೆಯುವ ಮೂಲಕ ಹೆಚ್ಚಿನ ಸಂಖ್ಯೆಯ ಸಹೃದಯರನ್ನು ತಲುಪಲು ಸಾಧ್ಯವಾಗಿದೆ. ಸಾಹಿತ್ಯ ಕೃತಿಯೊಂದನ್ನು ಆಧರಿಸಿ ಸಿನಿಮಾ ಮಾಡುವ ಪ್ರಕ್ರಿಯೆ ಒಂದು ಸವಾಲಿನ ಕೆಲಸ. ಅದು ಮೂಲಕೃತಿಯ ಯಥಾವತ್ತಾಗಿ ಹೊರಹೊಮ್ಮುವ ಮಾರ್ಗ ಒಂದು; ಸಾಹಿತ್ಯ ಕೃತಿಯನ್ನು ಒಂದು ಎಳೆಯಾಗಿ ಇಟ್ಟುಕೊಂಡು ಬೇರೊಂದು ಧ್ವನಿಯನ್ನು ಬಿಂಬಗಳಲ್ಲಿ ಒಡಮೂಡಿಸುವ ಮಾರ್ಗ ಇನ್ನೊಂದು. ಒಟ್ಟಿನಲ್ಲಿ ಸಿನಿಮಾ ಎಂದರೆ,

ಅದು ನಿರ್ದೇಶಕನ ಕಲಾಸೃಷ್ಟಿಯೇ ಸರಿ. ಇಂಥ ಸವಾಲು ಮತ್ತು ಪ್ರಕ್ರಿಯೆಗಳನ್ನು ಕುರಿತ ಅನುಭವ ಎಂದು ಖ್ಯಾತ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿಯವರು ಅಭಿಪ್ರಾಯಪಡುತ್ತಾರೆ. ಅಕ್ಷರರೂಪದ ಕಥೆ, ಕಾದಂಬರಿಗಳನ್ನು ಚಲನಚಿತ್ರವಾಗಿಸುವಾಗ ಕಥಾಕರ್ತೃವಿನ ಆಶಯವನ್ನು ತಪುಪುವುದು ಹಾಗೂ ಈಗಾಗಲೇ ಕಥನವನ್ನು ಓದಿರುವ ವಾಚಕನ ನಿರೀಕ್ಷೆಯನ್ನು ತೃಪ್ತಿಪಡಿಸುವುದು ಸವಾಲಿನ ಸಂಗತಿಯಾಗಿರುತ್ತದೆ. ಇಂತಹ ಸವಾಲನ್ನು ಹಲವು ನಿರ್ದೇಶಕರು ಗೆದ್ದಿದ್ದಾರೆ ಮತ್ತೆ ಕೆಲವರು ಸೋತಿದ್ದಾರೆ. ಆದರೂ ಸಾಹಿತ್ಯ ಮತ್ತ ಸಿನಿಮಾ ಎರಡು ಪರಸ್ಪರ ಪೂರಕವಾಗಿ ಸ್ಪರ್ಧೆ ಇಲ್ಲದಂತೆ ಬೆಳೆಯುತ್ತಿವೆ. ಒಟ್ಟಾರೆ, ಪ್ರಗತಿಶೀಲ ಸಾಹಿತ್ಯ ಪಂಥದ ಕಾಲದ ಸಾಹಿತಿಗಳು ರಚಿಸಿದ ಕಥೆ, ಕಾದಂಬರಿಗಳು ಹೆಚ್ಚಿನ ಪ್ರಮಾಣದಲ್ಲಿ ಚಲಚಚಿತ್ರಗಳಾಗಿವೆ ಎಂಬುದನ್ನು ನಿರಾಕರಿಸಲಾಗದು.

## ಪರಾಮರ್ಶನ ಗ್ರಂಥಗಳು:

1. ಬೆಳಗಲಿ ದು.ನಿಂ., (1994), ಸಾಹಿತ್ಯ, ಸಾಧನ ಮತ್ತು ಜೀವನ, ವಿಶ್ವ ಕರ್ನಾಟಕ ಸಾಹಿತ್ಯ ಮಂಟಪ, ಬಿಜಾಪುರ.
2. ಸುಬ್ಬರಾವ್ ತ.ರಾ., (2018), ಚಂದನದಗೊಂಬೆ, ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು.
3. ಸುಬ್ಬರಾವ್ ತ.ರಾ., (2001), ಹಂಸಗೀತೆ, ಗೀತಬುಕ್ ಹೌಸ್, ಮೈಸೂರು.
4. ಶ್ರೀನಿವಾಸಮೂರ್ತಿ ಪಿ.ಜಿ., (1995), ಕನ್ನಡ ಚಿತ್ರರಂಗ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
5. ನಾರಾಯಣ ಕೆ.ವಿ., (2020), ತೊಂಡುಮೇವು: ಕಂತೆ–ಮೂರು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
6. ಕೇಶವಮೂರ್ತಿ ಆರ್., ಸಾಪ್ತಾಹಿಕ ಪ್ರಭ, ಕನ್ನಡ ಪ್ರಭ ಪತ್ರಿಕೆ, ದಿನಾಂಕ: 30. 11.2013.
7. ರಾಘವೇಂದ್ರ ಅಡಿಗ, ಎಚ್ಚೆನ್, ಸಂಕ್ರಾಂತಿ ಬ್ಲಾಗ್, ದಿನಾಂಕ: 01.01.2025.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4. 0 International License.